ಆಯುಕ್ತರು
ಕಾರ್ಮಿಕ ಆಯುಕ್ತರ ಕಛೇರಿ

ಕರ್ನಾಟಕ ಸರ್ಕಾರ
ಕಾರ್ಮಿಕ ಇಲಾಖೆ

"ಕಾರ್ಮಿಕ ಭವನ" ಐಟಿಐ ಕಾಲೇಜ್ ಕಾಂಪೌಂಡ್,
ಬನ್ನೇರುಘಟ್ಟ ರಸ್ತೆ, ಬೆಂಗಳೂರು-560 029,
ಕಛೇರಿ-080-29753078
ಇ-ಮೇಲ್-labour.commissioner42@gmail.com

ಸಂಖ್ಯೆ:ಜಂಕಾಆ/ಸಿಎಎಲ್/ಸಿಆರ್-29/2019-20 ದಿನಾಂಕ: 10/09/2020

**:ಕಛೇರಿ ಜ್ಞಾಪನಾ:**

ವಿಷಯ: ಕೇಂದ್ರ ಸರ್ಕಾರದ ಯೋಜನೆಯಾದ ರಾಷ್ಟ್ರೀಯ ಬಾಲಕಾರ್ಮಿಕ ಯೋಜನೆ ಜಾರಿಯಲ್ಲಿರುವ 17 ಜಿಲ್ಲೆಗಳಲ್ಲಿ, ವಿಶೇಷ ಬಾಲಕಾರ್ಮಿಕ ತರಬೇತಿ ಕೇಂದ್ರಗಳು ಕಾರ್ಯನಿರ್ವಹಿಸದ 12 ಜಿಲ್ಲೆಗಳ ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿಗಳಲ್ಲಿ ಗೌರವಧನದ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳನ್ನು ಕೆಲಸದಿಂದ ಬಿಡುಗಡೆಗೊಳಿಸುವ ಬಗ್ಗೆ

ಉಲ್ಲೇಖ: 1 ಸರ್ಕಾರದ ಪತ್ರ ಸಂಖ್ಯೆ:ಕಾಇ 16 ಸಿಎಲ್‌ಸಿ 2020, ದಿನಾಂಕ:04/05/2020
2 ಈ ಕಛೇರಿ ಪತ್ರ ಸಂಖ್ಯೆ: ಜಂಕಾಆ/ಸಿಎಎಲ್/ಸಿಆರ್-10/2019-20, ದಿನಾಂಕ:29.02.2020

*=*=*=*=*

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕೇಂದ್ರ ಸರ್ಕಾರದ ಯೋಜನೆಯಾದ ರಾಷ್ಟ್ರೀಯ ಬಾಲಕಾರ್ಮಿಕ ಯೋಜನೆ ಜಾರಿಯಲ್ಲಿರುವ 17 ಜಿಲ್ಲೆಗಳಲ್ಲಿ, ವಿಶೇಷ ಬಾಲಕಾರ್ಮಿಕ ತರಬೇತಿ ಕೇಂದ್ರಗಳು ಕಾರ್ಯನಿರ್ವಹಿಸದ 12 ಜಿಲ್ಲೆಗಳ ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿಗಳಲ್ಲಿ ಗೌರವಧನದ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸಿಬ್ಬಂದಿಗಳ ಗೌರವಧನವನ್ನು 31ನೇ ಮಾರ್ಚ್-2020ರ ವರೆಗೆ ಪಾವತಿಸಲು ಕೋರಿ 12 ಜಿಲ್ಲೆಗಳಿಂದ ಮನವಿ ಸ್ವೀಕೃತವಾಗಿರುತ್ತದೆ. ಕೇಂದ್ರ ಸರ್ಕಾರದಿಂದ ಅನುದಾನ ಬಿಡುಗಡೆಯಾಗದೆ ಇರುವುದರಿಂದ ಗೌರವಧನವನ್ನು ರಾಜ್ಯ ಸರ್ಕಾರದಿಂದ ಪಾವತಿಸಲು ಕೋರಲಾಗಿರುತ್ತದೆ. ಈ ಜಿಲ್ಲೆಗಳು ಬೆಂಗಳೂರು ನಗರ, ಬಾಗಲಕೋಟೆ, ವಿಜಯಪುರ, ಚಿತ್ರದುರ್ಗ, ದಾವಣಗೆರೆ, ಧಾರವಾಡ, ಕಲಬುರಗಿ, ಕೋಲಾರ, ಕೊಪ್ಪಳ, ಮಂಡ್ಯ, ಹಾವೇರಿ ಹಾಗು ತುಮಕೂರು. ಈ ಕುರಿತು ಉಲ್ಲೇಖ-1ರಲ್ಲಿನ ಸರ್ಕಾರದ ಪತ್ರದಲ್ಲಿ ಈ ಮೇಲಿನ 12 ಜಿಲ್ಲೆಗಳ ರಾಷ್ಟ್ರೀಯ ಬಾಲಕಾರ್ಮಿಕ ಯೋಜನಾ ಸೊಸೈಟಿಗಳಲ್ಲಿ ಗೌರವಧನದ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸಿಬ್ಬಂದಿಗಳನ್ನು ಕೆಲಸದಿಂದ ಬಿಡುಗಡೆಗೊಳಿಸಿ, 31ನೇ ಮಾರ್ಚ್-2020ರ ವರೆಗೆ ಸಿಬ್ಬಂದಿಗಳ ಗೌರವಧನವನ್ನು ಪಾವತಿಸಲು ಆರ್ಥಿಕ ಇಲಾಖೆಗೆ ಶಿಪಾರಸ್ಸು ಮಾಡಲು ನಿರ್ದೇಶನವಿರುತ್ತದೆ.

ಆದ್ದರಿಂದ ರಾಷ್ಟ್ರೀಯ ಬಾಲಕಾರ್ಮಿಕ ಯೋಜನೆಯು ಜಾರಿಯಲ್ಲಿರುವ ಬೆಂಗಳೂರು ನಗರ, ಬಾಗಲಕೋಟೆ, ವಿಜಯಪುರ, ಚಿತ್ರದುರ್ಗ, ದಾವಣಗೆರೆ, ಧಾರವಾಡ, ಕಲಬುರಗಿ, ಕೋಲಾರ, ಕೊಪ್ಪಳ, ಮಂಡ್ಯ, ಹಾವೇರಿ ಹಾಗೂ ತುಮಕೂರು ಈ ಜಿಲ್ಲೆಗಳ ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿಗಳಲ್ಲಿ ಗೌರವಧನ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸಿಬ್ಬಂದಿಗಳನ್ನು ಕೂಡಲೇ ಕೆಲಸದಿಂದ ಬಿಡುಗಡೆಗೊಳಿಸಲು ಕ್ರಮಗಳನ್ನು ಕೈಗೊಂಡು, ವರದಿಯನ್ನು ಈ ಕಛೇರಿಗೆ ಸಲ್ಲಿಸಲು ಈ ಮೂಲಕ ಕೋರಿದೆ.

ಆಯುಕ್ತರು
ಕಾರ್ಮಿಕ ಇಲಾಖೆ

**ಇವರಿಗೆ,**

1. ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಬಾಲಕಾರ್ಮಿಕ ಯೋಜನಾ ಸಂಘ, ಬೆಂಗಳೂರು ನಗರ ಜಿಲ್ಲೆ
2. ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಬಾಲಕಾರ್ಮಿಕ ಯೋಜನಾ ಸಂಘ, ಬಾಗಲಕೋಟೆ ಜಿಲ್ಲೆ.
3. ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಬಾಲಕಾರ್ಮಿಕ ಯೋಜನಾ ಸಂಘ, ಹಾವೇರಿ ಜಿಲ್ಲೆ.

4. ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಬಾಲಕಾರ್ಮಿಕ ಯೋಜನಾ ಸಂಘ, ವಿಜಯಪುರ ಜಿಲ್ಲೆ.
5. ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಬಾಲಕಾರ್ಮಿಕ ಯೋಜನಾ ಸಂಘ, ಚಿತ್ರದುರ್ಗ ಜಿಲ್ಲೆ.
6. ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಬಾಲಕಾರ್ಮಿಕ ಯೋಜನಾ ಸಂಘ, ಧಾರವಾಡ ಜಿಲ್ಲೆ.
7. ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಬಾಲಕಾರ್ಮಿಕ ಯೋಜನಾ ಸಂಘ, ಕಲಬುರಗಿ ಜಿಲ್ಲೆ.
8. ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಬಾಲಕಾರ್ಮಿಕ ಯೋಜನಾ ಸಂಘ, ಕೋಲಾರ ಜಿಲ್ಲೆ.
9. ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಬಾಲಕಾರ್ಮಿಕ ಯೋಜನಾ ಸಂಘ, ಕೊಪ್ಪಳ ಜಿಲ್ಲೆ.
10. ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಬಾಲಕಾರ್ಮಿಕ ಯೋಜನಾ ಸಂಘ, ಮಂಡ್ಯ ಜಿಲ್ಲೆ.
11. ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಬಾಲಕಾರ್ಮಿಕ ಯೋಜನಾ ಸಂಘ, ತುಮಕೂರು ಜಿಲ್ಲೆ.
12. ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಬಾಲಕಾರ್ಮಿಕ ಯೋಜನಾ ಸಂಘ, ದಾವಣಗೆರೆ ಜಿಲ್ಲೆ.